# ಯುಪಿಎಸ್ಸಿಯಲ್ಲಿ ಹುಣಸೂರಿನ ತೇಜಸ್‌ಗೆ 338ನೇ ರ‍್ಯಾಂಕ್

■ ವಿಜಯವಾಣಿ ಸುದ್ದಿಜಾಲ ಮೈಸೂರು

ದಿನದಲ್ಲಿ 8 ರಿಂದ 10 ಗಂಟೆಗಳ ಕಾಲ ಸತತ ಪರಿಶ್ರಮದಿಂದ ಅಧ್ಯಯನ ಮಾಡಿದ್ದಲ್ಲದೇ ವಿವಿಧ ಸಂಸ್ಥೆಗಳಲ್ಲಿ ಸೂಕ್ತ ಮಾರ್ಗದರ್ಶನ ಪಡೆದಿದ್ದು ನನ್ನ ಯಶಸ್ಸಿಗೆ ಕಾರಣವಾಗಿದೆ ಎಂದು ಕೇಂದ್ರ ಲೋಕಸೇವಾ ಆಯೋಗ ನಡೆಸಿದ ಪರೀಕ್ಷೆಯಲ್ಲಿ 338 ರ‍್ಯಾಂಕ್ ಪಡೆದ ಹುಣಸೂರಿನ ಯು.ಪಿ. ತೇಜಸ್ 'ವಿಜಯವಾಣಿ'ಯೊಂದಿಗೆ ತಮ್ಮ ಸಂಸತ ಹಂಚಿಕೊಂಡರು.



» ಸತತ ಅಧ್ಯಯನ, ಮಾರ್ಗದರ್ಶನದಿಂದ ಯಶಸ್ಸು

» 'ವಿಜಯವಾಣಿ' ಜತೆ ಯಶಸ್ಸಿನ ಗುಟ್ಟು ಬಿಚ್ಚಿಟ್ಟ ಸಾಧಕ

ಮೂಲತಃ ಹುಣಸೂರು ತಾಲೂಕು ಊಯಿಲ ಗೌಡನಹಳ್ಳಿಯ ಕೃಷಿಕ ಕುಟುಂಬದ ತೇಜಸ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರರು. ಸದ್ಯ ಹುಣಸೂರು ಪಟ್ಟಣದಲ್ಲಿಯೇ ನೆಲೆಸಿರುವ ತೇಜಸ್ ಅವರು 10ನೇ ತರಗತಿವರೆಗೆ ಹುಣಸೂರಿನ ಸಂತ ಜೋಸೆಫ್ ಶಾಲೆಯಲ್ಲಿ ವ್ಯಾಸಂಗ ಮಾಡಿ, ದ್ವಿತೀಯ ಪಿಯುಸಿಯನ್ನು ಉಜಿರೆಯ ಶ್ರೀ ಕ್ಷೇತ್ರ ಧರ್ಮಸ್ಥಳ ಕಾಲೇಜಿನಲ್ಲಿ ಪೂರ್ಣಗೊಳಿಸಿದರು. ಬಳಿಕ 2015ರಲ್ಲಿ ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪೂರ್ಣಗೊಳಿಸಿದ್ದಾರೆ.

ಒಂದು ವರ್ಷದ ಮಗುವಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ ತೇಜಸ್, ತಾಯಿ ಹಾಗೂ ತಂದೆಯ ಅವಿಭಕ್ತ ಕುಟುಂಬದ ತಾತಾ, ಚಿಕ್ಕಪ್ಪ, ದೊಡ್ಡಪ್ಪ ಅವರ ಮಾರ್ಗ ದರ್ಶನದಲ್ಲಿ ಬೆಳೆದರು. ಇಂಜಿನಿಯರಿಂಗ್ ಓದುತ್ತಿರುವಾಗಲೇ ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕು ಎನ್ನುವ ಹಂಬಲ ಹುಟ್ಟಿತು. ಸ್ನೇಹಿತರೊಡನೆ ಜ್ಞಾನಬುತ್ತಿ ಸಂಸ್ಥೆಯಲ್ಲಿ ಮಾರ್ಗದರ್ಶನ ತರಗತಿಗೆ ಹೋದ ಬಳಿಕ ಯಾವ ರೀತಿ ಸಿದ್ಧತೆ ಮಾಡಿಕೊಳ್ಳಬಹುದು, ಯಾವ ರೀತಿ ಅಭ್ಯಾಸ ಮಾಡಬೇಕು ಎನ್ನುವುದು ತಿಳಿಯಿತು. ಅಲ್ಲಿಂದ ಹೊಸದಿಲ್ಲಿಯ ವಾದಿರಾಮ್ ಆ್ಯಂಡ್ ರವಿ ಕೋಚಿಂಗ್ ಸೆಂಟರ್‌ನಲ್ಲಿ ಒಂದು ವರ್ಷ ಕಾಲ ತರಬೇತಿ ಪಡೆದ ಬಳಿಕ ಮೂರು ಬಾರಿ ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದು, ಮೂರನೇ ಪ್ರಯತ್ನದಲ್ಲಿ ಯಶಸ್ಸು ದೊರೆತಿದೆ ಎಂದು ತಮ್ಮ ಅನುಭವ ಹಂಚಿಕೊಂಡರು.

## ಅಬಕಾರಿ ಎಸ್‌ಐಗೆ ಆಯ್ಕೆ

ಯುಪಿಎಸ್‌ಸಿ ಪರೀಕ್ಷೆ ಬರೆಯುತ್ತಿರುವ ಮಧ್ಯೆಯೇ ತೇಜಸ್ ಅವರು ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಹುದ್ದೆಯ ನಿರೀಕ್ಷೆಯಲ್ಲಿರುವಾಗಲೇ ಈಗ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಇನ್ನೆರಡು ತಿಂಗಳಲ್ಲಿ ಉನ್ನತ ಹುದ್ದೆಗೆ ನೇಮಕಗೊಳ್ಳಲಿದ್ದಾರೆ.